# ನಂಬಿಕೆಯ ನೂಲು

■ ಬಸು ಬೇವಿನಗಿಡದ
ಕಲೆ: ಎಚ್‌ಎಸ್‌ ಮೋನಪ್ಪ

## ದೇವಪ್ಪ–ಅನಸವ್ವ ಪ್ರಣಯ ವೃತ್ತಾಂತ

'ಈ ದೇವಪ್ಪನ ಜೋಡಿ ಮದುವಿ ಅಂದ್ರ ನಾ ಹೊಳೀಗೆ ಹಾರ್ತೇನಿ.' ಹಾಗೆ ಅಂದಿದ್ದವಳು ಇಂದು ಎಷ್ಟೊಂದು ಕುಲುಕುಲು ಇದ್ದಾಳೆ. ಆಶೀರ್ವಾದವಿರಲೆಂದು ಹರಸಲು ಬಂದಿದ್ದ ಜನರಿಗೆ ಕೃತಜ್ಞತೆಯಿಂದ ಬಾಗುತ್ತಿದ್ದಳು. ಕೇವಲ ಮೂರ್ನಾಲ್ಕು ದಿನದಲ್ಲಿ ಅವಳಲ್ಲಿ ಎಷ್ಟೊಂದು ಬದಲಾವಣೆ! ಈತನನ್ನು ತಾನು ಮದುವೆಯಾಗಲಾರೆ, ತಂದೆತಾಯಿಯ ಒತ್ತಾಯಕ್ಕೆ ಅಕಸ್ಮಾತ್ ವಿವಾಹವಾದರೂ ಇವನ ಊರಿಗೆಂದೂ ಬರಲಾರೆನೆಂದು ಹೇಳಿದ್ದ ಆಕೆ ಈಗ ಗಂಡನನ್ನು ಕ್ಷಣಮಾತ್ರವೂ ಅಗಲಲಾರೆನು, ಅಗಲಿ ವಿರಹದುರಿಯನ್ನು ತಾಳಲಾರೆನು ಎನ್ನುವಂತೆ ಕುಳಿತಿದ್ದಳು. ನವದಂಪತಿಗಳಿಬ್ಬರು ಆಗಿಂದಾಗ ತಮ್ಮ ಕಣ್ಣಲ್ಲಿ ವಿನಿಮಯ ಮಾಡಿಕೊಳ್ಳುವ ಪ್ರೇಮದ ಪರಿಯೇನು! ಅವರ ವಾರೆನೋಟಗಳಲ್ಲಿರುವ ತುಂಟಾಟವೇನು! ಕೈಗೆ ಕೈ ಸೋಕಿದಾಗ, ಮೈಗೆ ಮೈ ತಾಕಿದಾಗ ಅವರಲ್ಲಿ ಹರಿದಾಡುತಿದ್ದ ಪ್ರೀತಿಯ ತಾಕಲಾಟವೇನು!

ಯಾವುದೋ ಕಟ್ಟಕಡೆಯ ಹಳ್ಳಿಯಲ್ಲಿದ್ದ ಈ ಸುಂದರಿಗೆ ಏನೆಲ್ಲ ಮರ್ಯಾದೆ ಸಿಕ್ಕಿಬಿಟ್ಟಿತು. ಮಂದಿಗೆ ತಾನೆಷ್ಟು ಇಷ್ಟವಾಗುತ್ತಿದ್ದೇನೆ ಎನ್ನುವುದರ ಅರಿವು ಅವಳಲ್ಲಿ ಮೂಡಿತ್ತು. ಓಹ್! ತಾನುಟ್ಟ ಸೀರೆಯನ್ನು ನೂರಾರು ಮಂದಿ ಹೊಗಳಿದರು. ಕೆಲವರು ಬಾಯಿಬಿಟ್ಟು ಎಷ್ಟು ದುಡ್ಡು ಎಂದು ತಿಳಿದುಕೊಳ್ಳುವ ಪ್ರಯತ್ನವನ್ನು ಪರೋಕ್ಷವಾಗಿ ಮಾಡಿದರು. ಮದುವೆಯಲ್ಲಿ ವರನ ಮನೆಯವರು ವಧುವಿಗೆ ಕೊಡಿಸಿರುವ ಐದೂ ಸೀರೆಗಳು ಒಂದಕ್ಕೊಂದು ಚೆಂದ ಇವೆ. ಇವುಗಳಿಗೆ ತುಂಬಾ ದುಡ್ಡು ಕೊಟ್ಟಿರಬೇಕು. ದೇವಪ್ಪನಿಗೆ ರೊಕ್ಕ ಜಾಸ್ತಿಯಾಗಿವೆಯೆಂದು ಕಾಣುತ್ತದೆ! ಪ್ರಶಂಸೆಯ ಸುರಿಮಳೆ ಸುರಿದ ಮೇಲೆ ಟೀಕೆಯ ಜುಬುರು ಮಳೆಯೂ ಸುರಿಯಿತು.

'ಚಾದಂಗಡಿ ದೇವ್ಯಾ ಇಷ್ಟೆಲ್ಲ ಖರ್ಚು ಮಾಡ್ತಾನಂತ ಗೊತ್ತಿದ್ರೆ, ಆತ ಒಳ್ಳೆಯ ಬಟ್ಟೆಬರೆ ತೊಟ್ಟಾಗ ಇಷ್ಟೆಲ್ಲ ಚೆಂದ ಕಾಣ್ತಾನೆಂದು ಗೊತ್ತಿದ್ರೆ ತಮ್ಮ ಮಗಳನ್ನು ಕೊಡುವ ಯೋಚನೆ ಮಾಡಬಹುದಿತ್ತಲ್ಲ' ಎಂದೂ ಕೆಲವರು ಒಳಗೊಳಗೆ ನಲುಗಿದರು.

ಯಾರ ನಸೀಬು ಹೆಂಗ ಐತಿ ಅಂತ ಯಾರಿಗೆ ಗೊತ್ತಿರ್ತದ. ತಪ್ಪಿಹೋದ ಅವಕಾಶಕ್ಕೆ ನಸೀಬಿನ ಬಟ್ಟೆ ಹೊದಿಸಿ ಸುಮ್ಮನಾಗಿಸಿದರು. ದೇವಪ್ಪ ಮತ್ತು ಅನುಸೂಯ ನಡುವಿನ ಪ್ರೇಮಕ್ಕೆ ಕೊನೆಯೇ ಇಲ್ಲ ಎನ್ನುವಂತೆ ಅವರು ಓಡಾಡಿದರು. ಹೊಸದಾಗಿ ಮದುವೆಯಾದವರು ಒಬ್ಬರಿಗೊಬ್ಬರು ಇಷ್ಟಪಡುವುದರಲ್ಲಿ ಅಚ್ಚರಿಯಿರಲಿಲ್ಲ. ಆದರೆ ಅವರ ಚಾದಂಗಡಿ ಪಕ್ಕದಲ್ಲಿಯೇ ಮನೆ ಮಾಡಿಕೊಂಡಿರುವ ಮಲ್ಲವ್ವತ್ತೆಗೆ ಮಾತ್ರ ಅವರ ಅಪೂರ್ವ ಪ್ರೇಮ ಒಂದು ತೊಂದರೆ ಎನಿಸತೊಡಗಿತು. ಅದಕ್ಕೆ ಕೆಲವರು ಅವಳಿಗೆ ಅದರ ಬಗ್ಗೆ ತಲೆಕೆಡಿಸಿಕೊಳ್ಳದಿರುವ ಸಲಹೆ ಕೊಟ್ಟರು.

'ಅವರನ್ಯಾಕೆ ನೀ ನೋಡಲಿಕ್ಕೆ ಹೋಗ್ತಿ? ನಿನ್ನ ಮನಿಯೊಳಗ ನಿನ್ನಷ್ಟಕ್ಕ ನೀನು ಇರಾಕ ಆಗಲ್ಲೇನು? ಅವರು ಏನಾದರೂ ಮಾಡಿಕೊಳ್ಳಲಿ, ಅದನ್ನ ತಗೊಂಡು ನೀಯೇನು ಮಾಡುವಾಕಿ?'

'ಯವ್ವಾ, ನಾ ಯಾಕ ನೋಡಲೆ? ಅಂಥ ಕೆಲಸ ನೋಡಿದ್ರ ಕಣ್ಣಿಗೆ ಪಾಪ ಹತ್ತದ. ನಂದೇ ಮನಿಯೊಳಗ ಕೆಲಸ ನಡುಮಟಾ ಬಿದ್ದಿರತಾವು. ಅವರ ಮಾರಿ ನೋಡೋ ಇಚ್ಛಾ ಸೈತ ನನಗಿಲ್ಲ. ಆದ್ರೆ ಏನು ಮಾಡೋದು ಹೇಳು? ಬಾಯಲ್ಲಿ ನುಡೀಲಾರದಂಥ ಶಬ್ದ ಅವರ ಬಾಯಿಂದ ಬರ್ತಾವಲ್ಲ? ನನ್ನ ಕಿವಿಗೆ ಆ ಶಬ್ದ ಬೀಳ್ತಾವಲ್ಲ?' ಅವರು ನುಡಿಯುವ ಶಬ್ದಗಳು ಹೇಗಿರಬಹುದೆಂದು ಕೇಳುವ ಕುತೂಹಲ ಇತರರಿಗೆ ಮೂಡುತ್ತಿತ್ತು.

'ಹೇಳಬೇ ಚಿಗವ್ವಾ, ಏನು ಮಾತಾಡ್ತಾರ? ಒಬ್ಬರಿಗೊಬ್ಬರು ಏನು ಹೇಳ್ತಾರ?'

'ಏಯ್ ಹೋಗ್ಲೆ, ಈಕಿಗೆ ಎಷ್ಟು ಕುತೂಹಲ? ಆಕೀನ್ನ ನೋಡು. ಹೆಂಗ ಕೆರಳಿ ಕುಂತಾಳ?'

ಮದುವೆಯಾದ ಸಂದರ್ಭದಲ್ಲಿ ಮನೆಯಲ್ಲಿ ಗಂಡಹೆಂಡತಿ ಇಬ್ಬರೇ ಇರುವ ಸೌಭಾಗ್ಯ ತಮಗೆ ಕೂಡಿಬರಲಿಲ್ಲವೆಂದು ಅನೇಕರು ನೊಂದುಕೊಂಡರು. ಶಾಂತವ್ವ ಹೇಳುತ್ತಿದ್ದಳು. 'ಯವ್ವಾ, ನನ್ನ ಫಜೀತಿ ಏನು ಹೇಳ್ಲಿ ತಗೋ? ರಾತ್ರಿ ನನ್ನ ಹಂತೇಲಿ ಗಂಡ ಯಾವಾಗ ಬಂದು, ಯಾವಾಗ ಹೋಗ್ತಿದ್ದ ಅನ್ನೋದೆ ಗೊತ್ತಾಗ್ತಿರಲಿಲ್ಲ. ಗಂಡ ಮೈಯಿಗೆ ಮೈಯಿ ಹಚ್ಚಿದಂಥ ಖುಷಿ ಪಡೋದರೊಳಗೆ ಹೊಂಟಹೋಗಿರತಿದ್ದ. ಅತ್ತೆ ಅನ್ನಾಕಿ ಎಷ್ಟು ಅಂತಿದ್ಲು. ಯಾವಾಗ್ಲೂ ಹೇಂತಿ ಮಗ್ಗುಲದಾಗ ಬೀಳ್ತಿಯಲ್ಲೋ ಮಗನೆ. ಬ್ಯಾರೆ ಕೆಲಸ ಇಲ್ಲೇನು? ನಾವು ಅದೇ ಆಗ ಮಲಕ್ಕೊಂಡಿರುವಾಗ ಹಂಗಂದ್ರ ಏನು ಮಾಡೋದು ಹೇಳ್ರಿ?'

'ಶಾಂತವ್ವ, ನಿನ್ನ ಕತಿ ಹಂಗಾದ್ರ ನನ್ನ ಕತಿ ಏನು ಗೊತ್ತೇನು? ಚುಮುಚುಮು ಬೆಳಕು ಆಗ್ತಾ ಇದ್ದಂಗನ ಏಳಬೇಕು. ಇಪ್ಪತ್ತು ಕೊಡ ನೀರು ತರಬೇಕು. ಇವರಿಗೆಲ್ಲ ಫಡ್‌ಫಡ್ ರೊಟ್ಟಿ ಬಡದು ಹಾಕಬೇಕು. ಆಮ್ಯಾಲ ಮುಂಜಾನಿ ಹೋಗಿದ್ದ ಗಂಡಗ ರೊಟ್ಟಿಪಲ್ಯ ತಗೊಂಡು ಹೊಲಕ್ಕ ಹೋಗಬೇಕು. ಹೊಲಕ್ಕೂ ಹೋದ್ರೂ ಎಷ್ಟು ಕೆಲಸ ಅಂತೀ. ಕಳೆ ತೆಗೆಯೋದು, ಅಗಿ ಹಚ್ಚೋದು, ಎಡೆಕುಂಟಿ ಹಿಡಿಯೋದು, ಗೊಂಜಾಳ ತೆನೆ ಮುರಿಯೋದು, ಅವನ್ನ ಸುಲಿಯೋದು. ಮತ್ತೆ ಮನಿಗೆ ಬರಬೇಕಾದ್ರ ದೆವ್ವಿನಂತಹ ಹುಲ್ಲಿನ ಹೊರಿ ಹೊತ್ತುಕೊಂಡು ಬರಬೇಕು. ರಾತ್ರಿಗೆ ಒಲಿ ಮ್ಯಾಲ ಹಂಚು ಇಟ್ಟು ರೊಟ್ಟಿ ಬಡಬೇಕು. ಮಾಂವಗ ಮುದ್ದಿ ತಿರುವಿಕೊಡಬೇಕು.

